1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 14

CW- 26

ಪ್ರ. ಬೋ. ದಿನಾಂಕಃ 26-12-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಪ್ರಸಾದ್ |
| ತಂದೆ/ಗಂಡನ ಹೆಸರು | : | ಗುಡ್ಡಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೆ ಇ ಬಿ ಯಲ್ಲಿ ಕೆಲಸ |
| ವಾಸ | : | ಹರಿಹರ . |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನ್ನ ತಂದೆಗೆ ಇಬ್ಬರು ಹೆಂಡತಿಯರು, ಒಬ್ಬರು ರತ್ನಮ್ಮ ಮತ್ತು ಇನ್ನೊಬ್ಬರು ಲಕ್ಷ್ಮಮ್ಮ. ಲಕ್ಷ್ಮಮ್ಮ ನನ್ನ ತಾಯಿ, ನನ್ನ ತಾಯಿಗೆ ನಾಲ್ಕು ಜನ ಮಕ್ಕಳು. ರತ್ನಮ್ಮ ಇವರಿಗೆ ಇಬ್ಬರು ಮಕ್ಕಳು , ಅವರು ರಾಜು ಮತ್ತು ಮಾರುತಿ. ಮೃತ ಕುಮಾರ್ ನನ್ನ ಕೊನೆಯ ತಮ್ಮ. ಮೃತ ಕುಮಾರ ಇವನು ಮರಣ ಹೊಂದು ಪೂರ್ವದಲ್ಲಿ ಹರಿಹರದಲ್ಲಿ ಬೇರೆ ಪ್ರತ್ಯೇಕವಾಗಿ ವಾಸವಾಗಿದ್ದ. ಮದುವೆಯಾದ ನಂತರ ಹರಿಹರದ ಬೆಂಕಿಪುರದಲ್ಲಿ ವಾಸಮಾಡಿಕೊಂಡಿದ್ದ.

ಯಾವ ವಿಚಾರಕ್ಕೆ ಗಲಾಟೆ ಮಾಡಿರುತ್ತಾರೆ ಗೊತ್ತಿಲ್ಲ. ನನ್ನ ತಮ್ಮ ಕುಮಾರ ಕೊಲೆಯಾಗಿ ಮೃತಪಟ್ಟ. ನನ್ನ ತಮ್ಮನನ್ನು ಆರೋಪಿತರಾದ ರಾಜು ಮತ್ತು ಮಾರುತಿ ಕೊಲೆ ಮಾಡಿರುತ್ತಾರೆ. ಮೊದಲು ಮನೆ ಹತ್ತಿರ ಗಲಾಟೆ ಮಾಡಿ, ನಂತರ ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ ಚಾಕುವಿನಿಂದ ಚುಚ್ಚಿ ನನ್ನ ತಮ್ಮನನ್ನು ಕೊಲೆ ಮಾಡಿರುತ್ತಾರೆ. ಯಾವ ವಿಚಾರಕ್ಕೆ ಕೊಲೆ ಮಾಡಿರುತ್ತಾರೆ ಗೊತ್ತಿಲ್ಲ. ಕೊಲೆ ಮಾಡಿದ ವ್ಯಕ್ತಿಗಳು ವಿ ಸಿ ಯಲ್ಲಿ ಕಾಣಿಸುತ್ತಿರುವ ಆರೋಪಿತರಾಗಿರುತ್ತಾರೆ.

ರಾತ್ರಿ 11-30 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನನ್ನ ತಂಗಿ ನನಗೆ

ಫೋನ್ ಮಾಡಿದ್ದು, ತಕ್ಷಣ ನಾನು ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋದೆ , ಅಲ್ಲಿ ಇರಲಿಲ್ಲ, ದಾವಣಗೆರೆ ಸಿಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದ್ದು, ದಾವಣಗೆರೆ ಆಸ್ಪತ್ರೆಗೆ ಬಂದು ನಾನು ನನ್ನ ತಮ್ಮನನ್ನು ನೋಡಿದೆ. ಅಲ್ಲಿ ಮೃತ ದೇಹ ಇತ್ತು. ಅದಕ್ಕೆ ಸಂಬಂಧಪಟ್ಟಂತೆ ನಿಪಿ.2 ಫೋಟೋ ತೋರಿಸಲಾಗಿ ಸದರಿ ಫೋಟೋದಲ್ಲಿರುವ ವ್ಯಕ್ತಿ ಸದರಿ ನನ್ನ ತಮ್ಮ ಕುಮಾರ ಆಗಿರುತ್ತಾನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ–</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನಮ್ಮ ಮತ್ತು ಆರೋಪಿತರ ಮಧ್ಯ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಇದ್ದು , ಆ ದಾವೆಗಾಗಿ ನಮ್ಮಿಬ್ಬರ ಮಧ್ಯದ್ವೇಷ ಇತ್ತು ಎನ್ನುವುದು ನಿಜ. ಸದರಿ ಆಸ್ತಿಯ ವಿಚಾರದ ಹಿನ್ನೆಲೆಯಲ್ಲಿ ಆರೋಪಿತರು ನನ್ನ ತಮ್ಮನನ್ನು ಕೊಲೆ ಮಾಡಿರುತ್ತಾರೆ ಎನ್ನುವುದು ನಿಜ. ಆಸ್ಪತ್ರೆಯಲ್ಲಿ ನನ್ನ ತಮ್ಮನನ್ನು ನಾನು ನೋಡಿದಾಗ ಕುತ್ತಿಗೆ, ಎದೆ, ಮುಖದ ಹತ್ತಿರ ಗಾಯವಾಗಿದ್ದು ಕಂಡು ಬಂತು.

<u>ಪಾಟೀಸವಾಲುಃ</u>– 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ಸಿವಿಲ್ ದಾವೆಗೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ನಾನು ಹೋಗುತ್ತಿರಲಿಲ್ಲ. ಸಿವಿಲ್ ದಾವೆ ಏನಾಯಿತು ಎಂದು ನಾನು ತಿಳಿದುಕೊಂಡಿಲ್ಲ. ಸದರಿ ದಾವೆ ಆರೋಪಿತರ ಪರವಾಗಿ ಆದೇಶವಾಗಿದ್ದು ಗೊತ್ತು. ಸದರಿ ತೀರ್ಪಿನ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ. ಮದುವೆಯಾದ ನಂತರ ನನ್ನ ತಲೆಗೆ ಏಟಾಗಿದ್ದರಿಂದ ನಾನು ಶಿವಮೊಗ್ಗ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುತ್ತಿದ್ದೇನೆ. ನನ್ನ ಅಣ್ಣ ಫಕ್ಕಿರಪ್ಪ ಮತ್ತು ನನ್ನ ಮಧ್ಯ ಗಲಾಟೆಯಾಗಿತ್ತು, ಆಗ ನನ್ನ ತಲೆಗೆ ಪೆಟ್ಟಾಗಿತ್ತು, ಅದಕ್ಕೆ ನಾನು ಚಿಕಿತ್ಸೆ ಪಡೆಯುತ್ತಿದ್ದೇನೆ. ಗಲಾಟೆಯಾಗವ ಪೂರ್ದಲ್ಲಿ ನಾನು ಪ್ರತ್ಯೇಕವಾಗಿ ವಾಸವಾಗಿದ್ದೆ.

ನನ್ನದು ಸ್ವಂತ ಮನೆ ಇದೆ. ಸದರಿ ಮನೆ ನನ್ನ ಹೆಸರಿನಲ್ಲಿ ಖಾತೆ ಇದೆ. ಸದರಿ ಮನೆ ನಮಗೆ ಯಾವ ರೀತಿ ಬಂದಿದೆ ಎಂದು ಗೊತ್ತಿಲ್ಲ. ನಾನು ವಾಸವಾಗಿರುವ ಮನೆ ನನ್ನ ಸ್ವಂತದ್ದಾಗಿದ್ದು , ಅದು ನನ್ನ ಹೆಸರಿನಲ್ಲಿದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಗಲಾಟೆಯನ್ನು ನಾನು ನೋಡಿಲ್ಲ.

ನಾನು ಹರಿಹರ ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ಯಾರೂ ಇರಲಿಲ್ಲ. ದೇಹ ಇಲ್ಲ , ದಾವಣಗೆರೆಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು, ನಾನು ದಾವಣಗೆರೆಗೆ ಬಂದೆ. ಆಸ್ಪತ್ರೆಯಲ್ಲಿ ನರ್ಸ್ ರವರನ್ನು ಕೇಳಿದಾಗ ಅವರು ಹೇಳಿದರು. ಹರಿಹರದ ಆಸ್ಪತ್ರೆಗೆ ನಾನು ಹೋದಾಗ ಆಸ್ಪತ್ರೆಯ ಎಂಟ್ರನ್ಸನಲ್ಲಿದ್ದ ನರ್ಸ ರವರನ್ನು ನಾನು ಕೇಳಿದೆ. ನರ್ಸ್ ರವರನ್ನು ಹೊರತುಪಡಿಸಿ ಬೇರೆ ಯಾರು ಆಸ್ಪತ್ರೆಯಲ್ಲಿ ಇರಲಿಲ್ಲ. ಆಸ್ಪತ್ರೆಯಲ್ಲಿ ನೋಡಿದಾಗ ರಕ್ತವಾಗಿದ್ದು ನೋಡಿದೆ. ಹರಿಹರ ಆಸ್ಪತ್ರೆಗೆ ಬಂದಾಗ ರಾತ್ರಿ 11-00 ಗಂಟೆಯಾಗಿತ್ತು. ಆ ದಿನ ನನ್ನ ಜೊತೆ ನನ್ನ ಮಗ ಬಂದಿದ್ದ. ನಾನು ಆಸ್ಪತ್ರೆಗೆ ಹೋದಾಗ ನನ್ನ ಅಣ್ಣ ಫಕ್ಕಿರಪ್ಪ ಆಸ್ಪತ್ರೆಯ ವಾರ್ಡಿನಲ್ಲಿದ್ದ , ಅದು ಯಾವ ವಾರ್ಡ್ ಗೊತ್ತಿಲ್ಲ. ನನ್ನ ತಮ್ಮ ಕುಮಾರ ಈತನು ಪಿಎಂ ಮಾಡುವ ರೂಮಿನಲ್ಲಿದ್ದ. ನಾನು ನೋಡಿದಾಗ ಶವ ಒಂದೇ ಇತ್ತು , ಬೇರೆ ಯಾರು ಇರಲಿಲ್ಲ.

ನಾನು ದಾವಣಗೆರೆ ಆಸ್ಪತ್ರೆಯಲ್ಲಿ ರಾತ್ರಿ 11-45 ರಿಂದ ರಾತ್ರಿ 1-00 ಗಂಟೆ ವರೆಗೆ ಇದ್ದೆ. ಆ ಸಮಯದಲ್ಲಿ ಮೃತನ ಹೆಂಡತಿ ಲಕ್ಷ್ಮಿ ಆಸ್ಪತ್ರೆಯಲ್ಲಿ ಇರಲಿಲ್ಲ. ಆ ಸಮಯದಲ್ಲಿ ನನ್ನ ಅಣ್ಣ ಫಕ್ಕಿರಪ್ಪ ಸಹ ಆಸ್ಪತ್ರೆಯಲ್ಲಿ ಇದ್ದು, ಸ್ಕ್ಯಾನಿಂಗ್ ಮಾಡಬೇಕೆಂದು ಹೋದರು. ನನ್ನ ಅಣ್ಣನಿಗೆ ಚಿಕಿತ್ಸೆ ಕೊಡಿಸಲು ಅವರ ಜೊತೆ ಯಾರು ಇರಲಿಲ್ಲ. ನಾನು ನನ್ನ ಅಣ್ಣ ಫಕ್ಕಿರಪ್ಪನಿಗೆ ಚಿಕಿತ್ಸೆ ಕೊಡಿಸುವ ಪ್ರಯತ್ನ ಪಡಲಿಲ್ಲ. ಆ ದಿನ ರಾತ್ರಿ ಸಮಯದಲ್ಲಿ ಪೊಲೀಸರು ಯಾರೂ ಬಂದಿರಲಿಲ್ಲ. ಆಸ್ಪತ್ರೆಯಲ್ಲಿ ಮೃತನ ಹೆಂಡತಿ ಕಡೆಯವರು ಒಬ್ಬರು ಇದ್ದರು. ಅವರ ಹೆಸರು ಗೊತ್ತಿಲ್ಲ. ರಾತ್ರಿ 1-00 ಗಂಟೆ ನಂತರ ನಾನು ದಾವಣಗೆರೆಯಲ್ಲಿನ ನಮ್ಮ ಬೀಗರ ಮನೆಗೆ ಹೋದೆ. ನನ್ನ ತಮ್ಮನ ಕೊಲೆಯಾಗಿದ್ದರ ಬಗ್ಗೆ ನಾನು ಮೃತನ ಹೆಂಡತಿಯನ್ನು ಕರೆದುಕೊಂಡಾಗಲಿ ಅಥವಾ ನನ್ನ ಅಣ್ಣನನ್ನು ಕರೆದುಕೊಂಡು ಹೋಗಿ ದೂರು ಕೊಡಲಿಲ್ಲ. ನಾನು ಸಹ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿಲ್ಲ. ಬೀಗರ ಮನೆಯಿಂದ ನಂತರ ನಾನು ನನ್ನ ಹರಿಹರದ ಮನೆಗೆ ಹೋದೆ , ಆಸ್ಪತ್ರೆಗೆ ಹೋಗಲಿಲ್ಲ.

ಆಸ್ಪತ್ರೆಗೆ ಹೋದಾಗ ಶವ ಪರೀಕ್ಷೆ ಮಾಡಲು ಯಾವ ವೈದರು ಇದ್ದರು ಎಂದು ಅವರ ಹೆಸರು ಗೊತ್ತಿಲ್ಲ. ಶವ ಪರೀಕ್ಷೆ ಮಾಡುವ ಸಮಯದಲ್ಲಿ ವೈದ್ಯರು ಕೋಣೆ ಬಾಗಿಲು ಹಾಕಿ ಶವ ಪರೀಕ್ಷೆ ಮಾಡುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿದಾಗ ಬಾಗಿಲು ತೆರೆದಿತ್ತು , ಇನ್ನು ಶವ ಪರೀಕ್ಷೆ ಮಾಡಿರಲಿಲ್ಲ ಎಂದು ಉತ್ತರಿಸಿರುತ್ತಾರೆ.

ದಾವಣಗೆರೆ ಆಸ್ಪತ್ರೆಯಲ್ಲಿ ಮೃತ ನನ್ನ ತಮ್ಮನನ್ನು ಆಸ್ಪತ್ರೆಗೆಹೋದ ತಕ್ಷಣ ನೋಡಿದೆ , ಆಗ ಸಮಯ ಎಷ್ಟು ಆಗಿತ್ತು ಎಂದು ನೋಡಲಿಲ್ಲ. ನಾನುನೋಡಿದಾಗ ನನ್ನ ತಮ್ಮನನ್ನು ಉಟ್ಟ ಬಟ್ಟೆಯಲ್ಲಿ ಮಲಗಿಸಿದ್ದರು. ನಾನುನೋಡಿದಾಗ ಕೆಲಸಗಾರರು ಯಾರು ಇರಲಿಲ್ಲ. ಕೇಳಿದಾಗ ಒಳಗೆಹೋಗಿ ನೋಡಿ ಎಂದು ಹೇಳಿದರು , ನಾನು ಹೋಗಿ ನೋಡಿಕೊಂಡು ಬಂದೆ. ಫಕ್ಕಿರಪ್ಪ ಮತ್ತು ಕುಮಾರ ಇವರು ವಾಸಮಾಡಿಕೊಂಡಿದ್ದ ಪ್ರಶಾಂತ ನಗರಕ್ಕೆ ನಾನು ಯಾವಾಗಲಾದರೂ ಒಮ್ಮೆ ಹೋಗಿ ಬರುತ್ತಿದ್ದೆ.

ಮೃತ ಕುಮಾರ ಮತ್ತು ಆತನ ಹೆಂಡತಿ ಯಾವಾಗಲೂ ಜಗಳ ಮಾಡುತ್ತಿದ್ದರು ಎನ್ನುವುದು ಸುಳ್ಳು. ಮೃತ ಕುಮಾರ್ ಈತನು ತನ್ನ ಹೆಂಡತಿ ಬಗ್ಗೆ ಅನುಮಾನ ಪಟ್ಟು ಆಗಾಗ ಹೊಡಿ ಬಡಿ ಮಾಡುತ್ತಿದ್ದ ಎನ್ನುವುದು ಸುಳ್ಳು. ಆರೋಪಿತರು ಮೊದಲು ಮನೆ ಹತ್ತಿರ ಮೃತ ಕುಮಾರನೊಂದಿಗೆ ಗಲಾಟೆ ಮಾಡಿ, ನಂತರ ಆಸ್ಪತ್ರೆಯಲ್ಲಿ ಕೊಲೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಣಗೆರೆ ಶವಗಾರಕ್ಕೆ ನಾನು ಹೋಗಿಲ್ಲ, ಮೃತ ನನ್ನ ತಮ್ಮನನ್ನು ನೋಡಿಲ್ಲ, ಆತನಿಗಾದ ಗಾಯಗಳನ್ನು ನಾನು ನೋಡಿಲ್ಲ ಎನ್ನುವುದು ಸುಳ್ಳು. ಆಸ್ತಿ ವಿಚಾರಕ್ಕಾಗಿ ಆರೋಪಿತರು ನನ್ನ ತಮ್ಮನನ್ನು ಕೊಲೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಅಣ್ಣ ಫಕ್ಕಿರಪ್ಪ ಈತನು ಚಾಕುವಿನಿಂದ ನನ್ನ ತಮ್ಮನಿಗೆ ಚುಚ್ಚಿ ಕೊಲೆ ಮಾಡಿರುತ್ತಾನೆ ಎನ್ನುವುದು ಸುಳ್ಳು.

ಪುನಃ ಮಾರನೇ ದಿನ ಹೆಣ ನಮ್ಮ ಮನೆಗೆ ಬಂದಾಗ ನನ್ನ ಅಣ್ಣ ಫಕ್ಕಿರಪ್ಪನನ್ನು ನೋಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ , ನನ್ನ ಅಣ್ಣ ಫಕ್ಕಿರಪ್ಪನನ್ನು ವಿಚಾರಣೆ ಮಾಡಿದ ಬಗ್ಗೆ ನನ್ನ ಅಣ್ಣನಿಗೆ ಗೊತ್ತು. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ನನ್ನ ಅಣ್ಣನ ಮಾತುಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

SD/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.